ಚುಟುಕು ಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಬಳ್ಳಾರಿ: ಜೆಸ್ಕಾಂ ನಗರ ಉಪವಿಭಾಗ–2 ರ 110/11 ಕೆ.ವಿ. ಫೀಡರ್ ವ್ಯಾಪ್ತಿಯಲ್ಲಿ ಅಡ್ಡಲಾಗಿ ಇರುವ ಮರಗಳನ್ನು ಕಡಿಯುವ ಕಾರ್ಯ ಹಮ್ಮಿಕೊಂಡಿರುವುದರಿಂದ ನ. 03 ರಂದು ಬೆಳಿಗ್ಗೆ 8 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ನಗರ ಉಪವಿಭಾಗ–2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಎಫ್–1, ಎಫ್–2 ಹಾಗೂ ಎಫ್–14 ವ್ಯಾಪ್ತಿ: ಕಪ್ಪಗಲ್ಲು ರಸ್ತೆ, ಸಿದ್ದಾರ್ಥ ನಗರ, ಹೌಸಿಂಗ್ ಬೋರ್ಡ್, ಬೀಚಿನಗರ, ಕೆ.ಇ.ಬಿ ಕ್ವಾಟರ್ಸ್, ಭಗತ್ ಸಿಂಗ್ ನಗರ, ಹೆಚ್‌ಡಿಎಫ್‌ಸಿ ಬ್ಯಾಂಕ್, ಎಸಿ ಸ್ಟ್ರೀಟ್, ಬಾಲಾಜಿ ನರ್ಸಿಂಗ್ ಹೋಮ್, ಲಾ ಕಾಲೇಜು ರಸ್ತೆ, ಮುಲ್ಲಂಗಿ ಲೇಔಟ್, ಕನಕದುರ್ಗ ಲೇಔಟ್, ಗಾಂಧಿನಗರ, ಬಿ.ಎಸ್. ಕಾಂಪೌಂಡ್, ದಿವಾಕರ್ ಬಾಬು ಲೇಔಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಜೆಸ್ಕಾಂ ಇಲಾಖೆಯೊಂದಿಗೆ ಸಹಕರಿಸಬೇಕು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಅಕ್ರಮ ಮದ್ಯ ಮಾರಾಟ ತಡೆಗೆ ಕಟ್ಟುನಿಟ್ಟಿನ ಕ್ರಮ

ಮುಂಜಾನೆ, ತಡರಾತ್ರಿ ಮದ್ಯ ಮಾರಾಟ ಜಾಲದ ಮೇಲೆ ನಿಗಾ । ಕರ್ತವ್ಯಲೋಪ ಕಂಡುಬಂದರೆ ಅಧಿಕಾರಿಗಳೇ ಹೊಣೆ

ಸಂ.ಕ.ಸಮಾಚಾರ ಹೊಸಪೇಟೆ : ಬರಗಾಲದ ಹಿನ್ನೆಲೆಯಲ್ಲಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚುತ್ತಿರುವ ದೂರುಗಳ ಬಗ್ಗೆ ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್. ಬಸವಂತಪ್ಪ, ಅಕ್ರಮ ಮದ್ಯ ಮಾರಾಟ ತಡೆಗೆ ಅಬಕಾರಿ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ನಗರದ ವೈಕುಂಠಧಾಮ ಅತಿಥಿಗೃಹದಲ್ಲಿ ಸೋಮವಾರ ಅಬಕಾರಿ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಬರಗಾಲದಿಂದ ರೈತರು ಹಾಗೂ ಬಡ ಕುಟುಂಬಗಳು ಆರ್ಥಿಕತೆಯಲ್ಲಿ ಸಂಕಷ್ಟಕ್ಕೆ ಸಿಲುಕಿವೆ. ಇಂತಹ ಸಂದರ್ಭದಲ್ಲಿ ಅಕ್ರಮ ಮದ್ಯ ಮಾರಾಟದಿಂದ ಕುಟುಂಬಗಳ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಮತ್ತಷ್ಟು ಹೆಚ್ಚುತ್ತಿವೆ. ಮುಂಜಾನೆ ಹಾಗೂ ತಡರಾತ್ರಿ ಅಕ್ರಮವಾಗಿ ಮದ್ಯ ಸರಬರಾಜು ಮತ್ತು ಮಾರಾಟ ನಡೆಯುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಇದಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕು ಎಂದು ನಿರ್ದೇಶನ ನೀಡಿದರು.


ಹೊಸಪೇಟೆ ನಗರದ ವೈಕುಂಠಧಾಮ ಅತಿಥಿಗೃಹದಲ್ಲಿ ಅಬಕಾರಿ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಸಚಿವ ಬಸವಂತಪ್ಪ ಅವರು ಮಾತನಾಡಿದರು.

ದೂರುಗಳು ಬಂದಾಗ ಮಾತ್ರ ಕ್ರಮ ಕೈಗೊಳ್ಳದೆ ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಸ್ಥಳ ಪರಿಶೀಲನೆ ನಡೆಸಬೇಕು. ಅಕ್ರಮ ಮದ್ಯ ಮಾರಾಟ ಜಾಲದ ಮೇಲೆ ದಾಳಿ ನಡೆಸಿ, ಮದ್ಯ ಪೂರೈಕೆಯ ಮೂಲಗಳನ್ನು ಇನ್‌ವಾಯ್ಸ್ ಹಾಗೂ ಬ್ಯಾಚ್ ಸಂಖ್ಯೆ ಆಧರಿಸಿ ಪತ್ತೆ ಹಚ್ಚಬೇಕು. ಅಕ್ರಮವಾಗಿ ಮದ್ಯ ಪೂರೈಸುವ ವೈನ್‌ಶಾಪ್‌ಗಳು ಮತ್ತು ಬಾರ್‌ಗಳ ವಿರುದ್ಧ ಪ್ರಕರಣ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

ಸ್ಥಳೀಯ ಪೊಲೀಸ್ ಸಿಬ್ಬಂದಿ ಹಾಗೂ ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಕ್ರಮ ಮದ್ಯ ಮಾರಾಟದ ಕುರಿತು ಮಾಹಿತಿ ಸಂಗ್ರಹಿಸಬೇಕು. ಮುಂಬರುವ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇರುವುದರಿಂದ ಮುಂದಿನ ಮೂರು–ನಾಲ್ಕು ತಿಂಗಳು ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಮುಂದಿನ ದಿನಗಳಲ್ಲಿ ತಾವೇ ಗ್ರಾಮಗಳಿಗೆ ಭೇಟಿ ನೀಡಿ ಆಕಸ್ಮಿಕ ಪರಿಶೀಲನೆ ನಡೆಸುವುದಾಗಿ ತಿಳಿಸಿದ ಸಚಿವರು, ಕರ್ತವ್ಯದಲ್ಲಿ ನಿರ್ಲಕ್ಷ್ಯ ಅಥವಾ ಲೋಪ ಕಂಡುಬಂದರೆ ಸಂಬಂಧಪಟ್ಟ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಎಚ್ಚರಿಸಿದರು. ನಿಯಮ ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿರುವ ಬ್ರ್ಯಾಂಡಿಂಗ್ ಮಳಿಗೆಗಳ ಬಗ್ಗೆಯೂ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಡಿವೈಎಸ್‌ಪಿ ಸಿ. ಭಾರತಿ ವಿದ್ಯಾಧರ, ರೇಂಜ್ ಇನ್ಸ್‌ಪೆಕ್ಟರ್ ಷಹಾನಜ್ ಗಜಲ್, ಡಿಸ್ಟ್ರಿಕ್ಟ್ ಸ್ಕ್ವಾಡ್ ನಾಜೀಯಾ ಬೇಗಂ, ಸಬ್ ಡಿವಿಜನ್ ಸ್ಕ್ವಾಡ್ ಇನ್ಸ್‌ಪೆಕ್ಟರ್ ಶಂಕರ್ ಇದ್ದರು.

ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಲಿ

ಬರಗಾಲದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಮತ್ತು ಹಾಲಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಸ್ಥಳೀಯ ಆಡಳಿತ ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು. ಜಿಲ್ಲಾಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಕಿರಿಯ ಹಂತದ ಅಧಿಕಾರಿಗಳು ಹಾಗೂ ಗ್ರಾಮಮಟ್ಟದ ಸಿಬ್ಬಂದಿ ಪ್ರತಿದಿನ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಪರಿಶೀಲಿಸಿ, ತ್ವರಿತವಾಗಿ ಪರಿಹರಿಸಬೇಕು ಎಂದು ಸಚಿವರು ಸೂಚಿಸಿದರು. ಸಾರ್ವಜನಿಕರಿಗೆ ತೊಂದರೆಯಾಗದಂತೆ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಯಂತ್ರಿಸುವುದರ ಜತೆಗೆ, ಬರಗಾಲದ ಸಂದರ್ಭದಲ್ಲಿ ಜನರ ಮೂಲಭೂತ ಅಗತ್ಯಗಳಿಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಸರ್ಕಾರಿ ಜಾಗದಲ್ಲಿಯೂ ಅತಿಕ್ರಮಣ ಮಾಡಿ ಪವನ ಯಂತ್ರಗಳ ಅಳವಡಿಕೆ

ವಿಂಡ್ ಕಂಪನಿಗಳಿಂದ ರೈತರಿಗೆ ವಂಚನೆ: ಕ್ರಮಕ್ಕೆ ಆಗ್ರಹ

ಸಂ.ಕ.ಸಮಾಚಾರ ಕೂಡ್ಲಿಗಿ

ತಾಲೂಕಿನಾದ್ಯಂತ ವಿದ್ಯುತ್ ಪವನ ಯಂತ್ರಗಳ ಅಳವಡಿಸಿ ರೈತರಿಗೆ ವಂಚನೆ ಮಾಡುತ್ತಿರುವುದಲ್ಲದೆ, ಸರ್ಕಾರಿ ಜಾಗದಲ್ಲಿಯೂ ಅತಿಕ್ರಮಣ ಮಾಡಿ ಪವನ ಯಂತ್ರಗಳನ್ನು ಅಳವಡಿಸಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಗ್ರೇಡ್–2 ತಹಶೀಲ್ದಾರ ಎಚ್. ರಾಮಸ್ವಾಮಿ ಮೂಲಕ ಜಿಲ್ಲಾಧಿಕಾರಿಗೆ ಸೋಮವಾರ ಮನವಿ ಸಲ್ಲಿಸಿದರು.

ಕೂಡ್ಲಿಗಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳ ವ್ಯಾಪ್ತಿಯಲ್ಲಿ ಜೆ.ಎಸ್.ಡಬ್ಲ್ಯು ಮತ್ತು ಹಲವು ವಿಂಡ್ ಕಂಪನಿಗಳಿಂದ ಗಾಳಿ ವಿದ್ಯುತ್ ಘಟಕಗಳು ಸ್ಥಾಪನೆ ಹಾಗೂ ಅವುಗಳಿಗೆ ಸಂಪರ್ಕ ಕಲಿಸುವ ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಸರ್ಕಾರಿ ಜಮೀನುಗಳು ಅರಣ್ಯ ಪ್ರದೇಶಗಳು ಹಾಗೂ ಶಾಲೆಗಳ ಮತ್ತು ಗ್ರಾಮಗಳ ಸಮೀಪದ ಜಾಗಗಳನ್ನು ಬಳಸಿಕೊಳ್ಳಲಾಗಿದೆ ಎಂಬ ಗಂಭೀರ ಆರೋಪಗಳು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿವೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ವಾಸ್ತವಾಂಶಗಳನ್ನು ಬಹಿರಂಗಪಡಿಸಬೇಕೆಂದು ಅಗ್ರಹಿಸಿದರು.

ಕಂಪನಿಯ ಗಾಳಿ ವಿದ್ಯುತ್ ಘಟಕಗಳ ಸ್ಥಾಪನೆಗಾಗಿ ಕೆಲವು ರೈತರ ಜಮೀನುಗಳನ್ನು ಪಡೆದಿದ್ದು, ಈ ಪೈಕಿ ಕೆಲವರಿಗೆ ಪರಿಹಾರಧನ ನೀಡಲಾಗಿದ್ದರೆ.


ಕೂಡ್ಲಗಿ ತಾಲೂಕಿನಾದ್ಯಂತ ವಿದ್ಯುತ್ ಪವನ ಯಂತ್ರಗಳ ಅಳವಡಿಸಿ ರೈತರಿಗೆ ವಂಚನೆ ಮಾಡುತ್ತಿರುವುದಲ್ಲದೆ, ಸರ್ಕಾರಿ ಜಾಗದಲ್ಲಿಯೂ ಅತಿಕ್ರಮಣ ಮಾಡಿ ಪವನ ಯಂತ್ರಗಳನ್ನು ಅಳವಡಿಸಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳು ಗ್ರೇಡ್–2 ತಹಶೀಲ್ದಾರ ಎಚ್. ರಾಮಸ್ವಾಮಿ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಇನ್ನೂ ಕೆಲ ರೈತರಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂಬ ದೂರುಗಳಿವೆ, ಇದರಿಂದ ಅನ್ಯಾಯಕೊಳಗಾಗಿರುವ ರೈತರು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಿರುವುದಾಗಿ ತಿಳಿದುಬಂದಿದೆ.

ಈ ಎಲ್ಲಾ ಆರೋಪಗಳು ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ ಜಮೀನು ಕಳೆದುಕೊಂಡ ರೈತರಿಗೆ ಕಾನೂನುಬದ್ಧ ನ್ಯಾಯ ಒದಗಿಸಬೇಕು ಎಂದರು.

ಈಗಾಗಲೇ ತಾಲೂಕಿನಲ್ಲಿ ಕಳೆದ 60 ವರ್ಷಗಳಿಂದಲೂ ಸರ್ಕಾರಿ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಬಂದರೂ ಇದುವರೆಗೂ ಪಟ್ಟ ನೀಡಿಲ್ಲ, ಆದ್ದರಿಂದ ರೈತರಿಗೆ ಪಟ್ಟ ನೀಡಿ ಕುಟುಂಬಕ್ಕೆ ಭದ್ರತೆ ಒದಗಿಸಲು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಪಟ್ಟಣದ ಜೆಸ್ಕಾಂ ಉಪ ವಿಭಾಗದ ಕಚೇರಿಗೆ ತೆರಳಿ ಎಇಇ ಏಕಾಂತ ರೆಡ್ಡಿಗೆ ಮನವಿ ಸಲ್ಲಿಸಿ, ರೈತರು ಅಕ್ರಮ, ಸಕ್ರಮ ಯೋಜನೆಯಡಿ ಕೃಷಿ ಕೊಳವೆ ಬಾವಿಗಳಿಗೆ ವಿದ್ಯುತ್ ಕಂಬ ಮತ್ತು ತಂತಿ ಅಳವಡಿಸುವ ಕಾಮಗಾರಿ ನಡೆಸದಿದ್ದರೂ ಪೂರ್ಣಗೊಂಡಿವೆ ಎಂದು ರೈತರ ಹೆಸರುಗಳನ್ನು ಅಧಿಕೃತ ಪಟ್ಟಿಯಲ್ಲಿ ನಮೂದಿಸಿರುವ ಕುರಿತು ಸಂಭವನೀಯ ಭ್ರಷ್ಟಾಚಾರ ಮತ್ತು ಸರ್ಕಾರಿ ಹಣದ ದುರುಪಯೋಗದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಿ, ಬಾಧಿತ ರೈತರಿಗೆ ನ್ಯಾಯ ಒದಗಿಸುವಂತೆ ಅಗ್ರಹಿಸಿದರು.

ರೈತ ಸಂಘದ ಪದಾಧಿಕಾರಿಗಳಾದ ಬಾಣದ ಕೃಷ್ಣ, ನಲ್ಲಮುತ್ತಿ ರಮೇಶ, ಬಾಷಸಾಬ್, ಕೆ. ತಿಪ್ಪೇಸ್ವಾಮಿ, ಜಯರಾಜ ನಾಯ್ಕ್, ಪಾಂಡುರಂಗ ನಾಯ್ಕ್, ಕೆ. ಶಿವಕುಮಾರ, ಕೆ. ಬಸವರಾಜ, ಬೆಣ್ಣಿ ಶೆಟ್ಟಿ ಕೊಟ್ರಪ್ಪ, ನೂರ್ ಅಕ್ಬರ್ ಬಾಷ, ನವೀನ್‌ಕುಮಾರ, ಕುಪ್ಪಿನಕೆರೆ ಓಬಳೇಶ, ಚನ್ನಬಸಪ್ಪ ಸೇರಿದಂತೆ ಅನೇಕ ರೈತರು ಇದ್ದರು.


ಎಮ್ಮಿಗನೂರು ಗ್ರಾಮದ ಶ್ರೀ ಆಂಜಿನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ ರೈತರ ಸಂಘಟನಾ ಸಭೆಯನ್ನುದ್ದೇಶಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಗೌರವಾಧ್ಯಕ್ಷ ಬಿ.ವಿ.ಗೌಡ ಮಾತನಾಡಿದರು.

5ರಂದು ಬೃಹತ್ ರೈತರ ಸಭೆ

ಸಂ.ಕ. ಸಮಾಚಾರ ಎಮ್ಮಿಗನೂರು : ತುಂಗಭದ್ರಾ ಜಲಾಶಯದ ನೀರನ್ನು ನಂಬಿ ನಾಟಿ ಮಾಡಿರುವ ಭತ್ತವೂ ಸೇರಿದಂತೆ ಬಿತ್ತನೆ ಮಾಡಿದ ವಿವಿಧ ಬೆಳೆಗಳನ್ನು ಉಳಿಸಿಕೊಳ್ಳಲು ನೀರನ್ನು ಒದಗಿಸುವ ಬಗ್ಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಗಮನ ಸೆಳೆಯಲು ನ. 5ರಂದು ಕಂಪ್ಲಿ ಪಟ್ಟಣದಲ್ಲಿ ಕಂಪ್ಲಿ ತಾಲೂಕಿನ ರೈತರ ಬೃಹತ್ ಸಭೆಯನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಗೌರವಾಧ್ಯಕ್ಷ ಬಿ.ವಿ.ಗೌಡ ತಿಳಿಸಿದರು.

ಅವರು ಇಂದು ತಾಲೂಕಿನ ಎಮ್ಮಿಗನೂರು ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ ರೈತರ ಸಂಘಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಈಗಾಗಲೇ ನಾಟಿ ಮಾಡಿದ ಭತ್ತ, ಮೆಣಸಿನಕಾಯಿ ಸೇರಿದಂತೆ ವಿವಿಧ ಬೆಳೆಗಳನ್ನು ಉಳಿಸಿಕೊಳ್ಳಲು ನಮಗೆ ಡಿ. 15ರವರೆಗೆ ಕಡ್ಡಾಯವಾಗಿ ಕಾಲುವೆಗಳಿಗೆ ನೀರನ್ನು ಒದಗಿಸಬೇಕು. ಇಲ್ಲದಿದ್ದರೆ, ರೈತರು ಕೋಟ್ಯಾಂತರ ರೂಗಳ ನಷ್ಟವನ್ನು ಅನುಭಿಸಬೇಕಾಗುತ್ತದೆ. ಕಳೆದ ವರ್ಷವೂ ಸಹಿತ ಕ್ರೆಸ್ಟ್ ಗೇಟುಗಳ ಪುನರ್ ಜೋಡಣೆಗಾಗಿ ಎರಡನೇ ಬೆಳೆಗೆ ನೀರನ್ನು ಕೊಟ್ಟಿರಲಿಲ್ಲ. ಈ ವರ್ಷವೂ ಸಹಿತ ಮುಂಗಾರು ಹಂಗಾಮಿನಲ್ಲಿ ಸಮರ್ಪಕ ಮಳೆಯಾಗಲಿಲ್ಲ. ಆದರೂ ಜಲಾಶಯದ ಮೇಲ್ಭಾಗದಲ್ಲಿ ಉತ್ತಮ ಮಳೆಯಾದ ಹಿನ್ನೆಲೆಯಲ್ಲಿ ಜಲಾಶಯವು ಬಹುತೇಕ ಭರ್ತಿಯಾಗಿತ್ತು. ಆದರೆ ಇದೀಗ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ಅವಧಿಗೂ ಮುನ್ನ ನೀರು ನಿಲುಗಡೆ ಮಾಡುವುದು ಸರಿಯಲ್ಲ. ಈಗ ಬೆಳೆದಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಡಿ. 15 ರವರೆಗೆ ನೀರೊದಗಿಸಬೇಕೆಂದು ಆಗ್ರಹಿಸಿದರು. ಒಂದು ವೇಳೆ ನೀರನ್ನು ಒದಗಿಸದಿದ್ದರೆ, ಲಕ್ಷಾಂತರ ರೈತರು ಉಗ್ರ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದ ಅವರು, ಹಿನ್ನೆಲೆಯಲ್ಲಿ ಕಂಪ್ಲಿ ಪಟ್ಟಣದಲ್ಲಿ ಡಿ. 5ರಂದು ಸಭೆಯನ್ನು ಏರ್ಪಡಿಸಿದ್ದು, ತಾಲೂಕಿನ ಎಲ್ಲಾ ರೈತರು ಭಾಗವಹಿಸಬೇಕೆಂದು ಮನವಿ ಮಾಡಿದರು. ಸಂಘದ ತಾಲೂಕು ಅಧ್ಯಕ್ಷ ವಿ. ವೀರೇಶ, ಮುಖಂಡರಾದ ಬಿ. ಸದಾಶಿವಪ್ಪ, ಸೂಗಪ್ಪ, ಕಾಗಿ ಈರಣ್ಣ ಸೇರಿದಂತೆ ನೂರಾರು ರೈತರು ಭಾಗವಹಿಸಿದ್ದರು.



ಬಳ್ಳಾರಿಯಲ್ಲಿ ಹಾಲಿದರ ದರ ಏರಿಕೆ ಖಂಡಿಸಿ ಎಸ್‌ಯುಸಿಐ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹಾಲಿನ ದರ ಹೆಚ್ಚಳ ಖಂಡಿಸಿ ಪ್ರತಿಭಟನೆ

ಬಳ್ಳಾರಿ: ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ವತಿಯಿಂದ ಹಾಲಿನ ಧರ ಹೆಚ್ಚಳ ಮಾಡಿರುವುದನ್ನು ಖಂಡಿಸಿ ನಗರದ ರಾಯಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ಉದ್ದೇಶಿಸಿ ಎಸ್‌ಯುಸಿಐ (ಸಿ) ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಎ. ದೇವದಾಸ್ ಮಾತನಾಡಿ, ರಾಜ್ಯ ಸರ್ಕಾರವು ಹಾಲಿನ ದರವನ್ನು ಪ್ರತಿ ಲೀಟರಿಗೆ ರೂ. 8ರಂತೆ ಹೆಚ್ಚಳ ಮಾಡಿರುವ ನಿರ್ಧಾರವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಹೈನುಗಾರರ ಸಮಸ್ಯೆಯನ್ನು ಪರಿಹರಿಸಲು ಪರ್ಯಾಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಮುಖಂಡ ಡಾ. ಪ್ರಮೋದ ಮಾತನಾಡಿ, ಮುಂಬರುವ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು, ಕರ್ನಾಟಕ ಹಾಲು ಒಕ್ಕೂಟದ ರಾಜಕಾರಣಿ ಪದಾಧಿಕಾರಿಗಳು ಗ್ರಾಮೀಣ ಹೈನುಗಾರರಿಗೆ ಬೆಂಬಲ ನೀಡುವ ಹೆಸರಿನಲ್ಲಿ ಇಂತಹ ಒತ್ತಾಯವನ್ನು ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿದೆ. ಸರ್ಕಾರ ಹಾಲು ಉತ್ಪಾದಕರ ಮತ್ತು ಗ್ರಾಹಕರ ಇಬ್ಬರ ಹಿತವನ್ನು ಪರಿಗಣಿಸಬೇಕು. ಮೇವು, ಪಶು ಆಹಾರ ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ಪೂರೈಸಬೇಕು. ಕೆಎಂಎಫ್ ನಲ್ಲಿರುವ ದುಂದುವೆಚ್ಚ ತಡೆಗಟ್ಟಬೇಕು.

ಉತ್ಪಾದನೆಯ ವೆಚ್ಚ ಕಡಿಮೆ ಮಾಡುವ ಬದಲಿಗೆ ದರ ಹೆಚ್ಚಳವನ್ನೇ ಪರಿಹಾರ ಎಂದು ಪರಿಗಣಿಸಿದರೆ ಆಗ ಹಣದುಬ್ಬರದ ವಿಷಚಕ್ರಕ್ಕೆ ಎಲ್ಲರೂ ಸಿಕ್ಕಿಹಾಕಿಕೊಳ್ಳುತ್ತಾರೆ. ಮಕ್ಕಳು ಸೇರಿದಂತೆ ಎಲ್ಲರಿಗೂ ಹಾಲು ಅವಶ್ಯಕ ಪೌಷ್ಟಿಕ ಆಹಾರವಾದ ಕಾರಣ ಸರ್ಕಾರ ತಕ್ಷಣವೇ ತನ್ನ ಈ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಂ.ಎಎನ್. ಮಂಜುಳ, ಆರ್. ಸೋಮಶೇಖರ್ ಗೌಡ, ಡಿ. ನಾಗಲಕ್ಷ್ಮಿ, ಗೋವಿಂದ, ಈಶ್ವರಿ, ಸುರೇಶ್, ವಿಜಯಲಕ್ಷ್ಮಿ, ಜೆ.ಪಿ. ರವಿಕಿರಣ್, ಜಗದೀಶ್, ಗುರಳ್ಳಿರಾಜ ಬೆಂಬಲಿಗರು ಭಾಗವಹಿಸಿದ್ದರು.

ಹೆಲ್ಮೆಟ್ ಧರಿಸದವರಿಗೆ ದಂಡ

ಸಂ.ಕ. ಸಮಾಚಾರ ಬಳ್ಳಾರಿ : ನಗರದಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳನ್ನು ನಿಯಂತ್ರಿಸುವ ಹಾಗೂ ವಾಹನ ಸವಾರರ ಸುರಕ್ಷತೆಯನ್ನು ಖಚಿತಪಡಿಸುವ ಉದ್ದೇಶದಿಂದ ಪೊಲೀಸ್ ಇಲಾಖೆ ಮತ್ತೆ ಹೆಲ್ಮೆಟ್ ಕಡ್ಡಾಯ ನಿಯಮವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿದೆ.

ಸೋಮವಾರ ಬೆಳಗ್ಗೆಯಿಂದಲೇ ನಗರದ ಪ್ರಮುಖ ವೃತ್ತಗಳು ಹಾಗೂ ರಸ್ತೆಗಳಲ್ಲಿ ಸಂಚಾರಿ ಪೊಲೀಸರು ವಿಶೇಷ ತಪಾಸಣೆ ಕಾರ್ಯಾಚರಣೆ ಆರಂಭಿಸಿದ್ದು, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಸವಾರರಿಗೆ ತಲಾ 500 ರೂ. ದಂಡ ವಿಧಿಸಿದ್ದಾರೆ.

ಕಳೆದ ಜೂನ್ 1ರಿಂದ ಬಳ್ಳಾರಿ ಜಿಲ್ಲಾ ಪೊಲೀಸ್ ಇಲಾಖೆಯ ಆದೇಶದಂತೆ ಜಿಲ್ಲೆಯಲ್ಲಿ ದ್ವಿಚಕ್ರ ವಾಹನ ಸವಾರರಿಗೆ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು. ಆರಂಭದಲ್ಲಿ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆದರೆ, ನಂತರದ ದಿನಗಳಲ್ಲಿ ಪೊಲೀಸ್ ತಪಾಸಣೆ ಕಡಿಮೆಯಾಗುತ್ತಿದ್ದಂತೆ ಅನೇಕ ಸವಾರರು ಹೆಲ್ಮೆಟ್ ಧರಿಸುವ ನಿಯಮವನ್ನು ನಿರ್ಲಕ್ಷಿಸಿದ್ದರು. ಇದರಿಂದ ನಗರದಲ್ಲಿ ಹೆಲ್ಮೆಟ್ ಇಲ್ಲದೆ ವಾಹನ ಚಲಾಯಿಸುವವರ ಸಂಖ್ಯೆ ಮತ್ತೆ ಹೆಚ್ಚಾಗಿತ್ತು.

ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆ ನಿಯಮವನ್ನು ಮರು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಂದಾಗಿದೆ. ಅದರಂತೆ ನಗರದ ಎಸ್ಪಿ ಸರ್ಕಲ್, ರಾಯಲ್ ಸರ್ಕಲ್, ಮೋದಿ ಸರ್ಕಲ್, ದುರ್ಗಮ್ಮಗುಡಿ ದೇವಸ್ಥಾನದ ಸಮೀಪ, ಗಾಂಧಿನಗರ ಪೊಲೀಸ್ ಠಾಣೆ ಸೇರಿದಂತೆ ವಿವಿಧ ಪ್ರಮುಖ ಸ್ಥಳಗಳಲ್ಲಿ ಸಂಚಾರಿ ಪೊಲೀಸರು ವಾಹನಗಳನ್ನು ತಡೆದು ತಪಾಸಣೆ ನಡೆಸಿದರು. ಈ ವೇಳೆ ಹೆಲ್ಮೆಟ್ ಇಲ್ಲದೆ ಸಂಚರಿಸುತ್ತಿದ್ದ ಸವಾರರಿಗೆ 500 ರೂ. ದಂಡ ವಿಧಿಸಲಾಯಿತು. ದಂಡ ಪಾವತಿಸಲು ಸಾಧ್ಯವಾಗದ ಕೆಲವು ಸವಾರರಿಗೆ ಹೆಲ್ಮೆಟ್ ಧರಿಸಿಕೊಂಡು ವಾಹನ ಚಲಾಯಿಸುವಂತೆ ಪೊಲೀಸರು ಸೂಚಿಸಿ, ರಸ್ತೆ ಸುರಕ್ಷತೆಯ ಕುರಿತು ಅರಿವು ಮೂಡಿಸಿದರು.

ಬೆಳಗ್ಗೆಯಿಂದಲೇ ನೂರಾರು ವಾಹನಗಳನ್ನು ತಡೆದು ತಪಾಸಣೆ ನಡೆಸಿದ ಪರಿಣಾಮ, ಸರ್ಕಾರಿ ನೌಕರರು ಸೇರಿದಂತೆ ಹಲವು ಸಾರ್ವಜನಿಕರು ಹೆಲ್ಮೆಟ್ ಇಲ್ಲದೆ ಸಂಚರಿಸಿ ಪೊಲೀಸರ ಕಾರ್ಯಾಚರಣೆಗೆ ಸಿಲುಕಿದರು. ಏಕಾಏಕಿ ಆರಂಭವಾದ ತಪಾಸಣೆಯಿಂದ ಹೆಲ್ಮೆಟ್ ಮರೆತು ಬಂದಿದ್ದ ಕೆಲವರು ತಕ್ಷಣವೇ ಹೆಲ್ಮೆಟ್ ಖರೀದಿಸಲು ಹಾಗೂ ವ್ಯವಸ್ಥೆ ಮಾಡಿಕೊಳ್ಳಲು ಮುಂದಾದರು.

ಜೀವದ ಸುರಕ್ಷತೆಗೆ ಹೆಲ್ಮೆಟ್ ಧರಿಸಿ : ಹೆಲ್ಮೆಟ್ ಧರಿಸುವುದು ಕೇವಲ ದಂಡದಿಂದ ತಪ್ಪಿಸಿಕೊಳ್ಳಲು ಇರುವ ನಿಯಮವಲ್ಲ. ರಸ್ತೆ ಅಪಘಾತಗಳ ಸಂದರ್ಭದಲ್ಲಿ ತಲೆಗೆ ಉಂಟಾಗಬಹುದಾದ ಗಂಭೀರ ಗಾಯಗಳಿಂದ ಜೀವ ರಕ್ಷಿಸಿಕೊಳ್ಳುವ ಪ್ರಮುಖ ಸುರಕ್ಷತಾ ಕ್ರಮವಾಗಿದೆ. ಆದ್ದರಿಂದ ವಾಹನ ಸವಾರರು ಪೊಲೀಸರ ತಪಾಸಣೆ ಇದ್ದಾಗ ಮಾತ್ರವಲ್ಲದೆ, ಪ್ರತಿದಿನವೂ ಸ್ವಯಂಪ್ರೇರಣೆಯಿಂದ ಹೆಲ್ಮೆಟ್ ಧರಿಸಿ ರಸ್ತೆ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂಬ ಜಾಗೃತಿ ಮೂಡಿಸುವ ಪ್ರಯತ್ನವನ್ನು ಪೊಲೀಸ್ ಇಲಾಖೆ ಕೈಗೊಂಡಿದೆ.

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ–ಟೆಂಡರು ಸೂಚನೆ ಸಂ.: HE-TRD-2025-26-OT-41-2 ದಿನಾಂಕ: 28.10.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ವಾಸ್ಕೋ–ಡ–ಗಾಮಾ (ವಿಎಸ್‌ಜಿ) ಕೊನೆಯಲ್ಲಿ ಕ್ಯಸೆಲ್ ರಾಕ್ (ಸಿಎಲ್‌ಆರ್) ಯಾರ್ಡ್‌ನಲ್ಲಿ ಶಾರ್ಟ್ ಶಂಟಿಂಗ್ ನೆಕ್‌ನ ವ್ಯವಸ್ಥೆಗಾಗಿ ಓಹೆಚ್‌ಇ ಮೇಲಿನ ಮಾರ್ಪಾಡು.	ರೂ. 57,82,969.30

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.11.2026, 15:00 ಗಂಟೆಯವರೆಗೆ

ಇ–ಟೆಂಡರು ಸೂಚನೆ ಸಂ.: HE-TRD-2025-26-OT-27-4 ದಿನಾಂಕ: 28.10.2026

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಗಿಣಿಗೇರ (ಜಿಐಎನ್) ನಿಲ್ದಾಣದಲ್ಲಿ 1 ಹೆಚ್ಚುವರಿ ಲೂಪ್ ಲೈನಿನ ವ್ಯವಸ್ಥೆಗಾಗಿ ಓಹೆಚ್‌ಇ ಮಾರ್ಪಾಡು.	ರೂ. 1,18,39,957.40

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.11.2026, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ವಿದ್ಯುತ್ ಅಭಿಯಂತರರು / ಟ್ರ್ಯಾಕ್ಷನ್ ವಿನಿಯೋಗ / ಹುಬ್ಬಳ್ಳಿ

PUB/578/AAMO/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

सेन्ट्रल बैंक ऑफ़ इंडिया
Central Bank of India
1911 से आपके लिए ''केंद्रित'' "CENTRAL" TO YOU SINCE 1911

ಹೊಸಪೇಟೆ ಶಾಖೆ

ಸ್ಥಿರಾಸ್ತಿಯ ಮಾರಾಟಕ್ಕೆ ಮಾರಾಟದ ಸೂಚನೆ

ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಸೂಚನೆ. ಭದ್ರತೆಯ ಅಡಿಯಲ್ಲಿ ಮತ್ತು ಹಣಕಾಸು ಆಸ್ತಿಗಳ ಪುನರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002(2002 ರ ಪ್ರಕಾರ 6 ವರೆಗೆ ಓದಿ) 2002 ರ ಸುರಕ್ಷತಾ ಆಸಕ್ತಿ(ಜಾರಿ) ನಿಯಮಗಳ ಅಡಿಯಲ್ಲಿ.

ಹಣಕಾಸು ಸ್ವತ್ತುಗಳ ಭದ್ರತೆ, ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಕಾಯ್ದೆ, 2002 (SARFAESI ACT) ಅಡಿ ಹಾಗೂ ಭದ್ರತಾ ಆಸಕ್ತಿ (ಜಾರಿ) ನಿಯಮ 2002ರ ನಿಯಮ 8(6)ರ ಅಡಿ ಇ–ಹರಾಜು ಮೂಲಕ ಕರೆಯಲಾದ ಸ್ಥಿರಾಸ್ತಿಗಳ ಮಾರಾಟದ ನೋಟಿಸ್.

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ'** ಮತ್ತು **'ಸ್ವತ್ತು ಹೇಗಿದೆಯೋ ಹಾಗೆ'** ಹಾಗೂ **'ಏನಿದೆಯೋ ಇದ್ದ ಹಾಗೆ'** ಸ್ಥಿತಿಯಲ್ಲಿ ಈ ಆಸ್ತಿಗಳನ್ನು ದಿನಾಂಕ: 07–10–2026 ದಂದು ಆನ್ ಲೈನ್ ವೆಬ್ ಪೋರ್ಟಲ್ https://BANKNET.COM) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಬರಬೇಕಾಗಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹರಾಜು ಮಾಡಲಾಗುವುದು. ಇ–ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbank.bank.in ಅನ್ನು ನೋಡಿ. ಆಸಕ್ತ ಬಿಡ್‌ದಾರರು 'Banknet.com' ವಾಲೆಟ್ ಮೂಲಕ ಪೂರ್ವ ಬಿಡ್ ಇಎಂಡಿ ಮೊತ್ತವನ್ನು ಜಮಾ ಮಾಡಬಹುದು. ಕೊನೆಯ ಕ್ಷಣದ ಸಮಸ್ಯೆಗಳನ್ನು ತಪ್ಪಿಸಲು, ಇ–ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್‌ದಾರು ಇ–ವಾಲೆಟ್ ಮೂಲಕ ಮುಂಚಿತವಾಗಿಯೇ ಪಾವತಿ ಮಾಡಬೇಕಾಗುತ್ತವೆ.

ಈ ಕೆಳಗೆ ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ಮಾರಾಟಕ್ಕೆ ಲಭ್ಯವಿವೆ. ಈ ಆಸ್ತಿಗಳಿಗೆ ಮೀಸಲು ಬೆಲೆ ಮತ್ತು ಠೇವಣಿ ಮಾಡಬೇಕಾದ ಇಎಂಡಿ ಮೊತ್ತದ ವಿವರಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ.

ಶಾಖೆ: ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹೊಸಪೇಟೆ

ಸಾಲಗಾರರ ಹೆಸರು ಮತ್ತು ವಿಳಾಸ: ಶ್ರೀ ಕೆ. ಮಹಾದೇವಪ್ಪ
ಕೇ/ಆಫ್ ರಾಮಣ್ಣ(ಪೋಲಿಸ್), 1ನೇ ಮಹಡಿ, ವಿದ್ಯಾರಣ್ಯ ನಗರ, ನಂದಿನಿ ಕಲ್ಯಾಣ ಮಂಟಪದ ಹತ್ತಿರ, ಸಂಡೂರ ರಸ್ತೆ, ಹೊಸಪೇಟೆ–583203.

ಜಾಮೀನುದಾರರು/ಅಡಮಾನದಾರರು/ಸಹ ಸಾಲಗಾರರ ಹೆಸರು ಮತ್ತು ವಿಳಾಸ: ಕೆ.ಎಮ್. ನಾಗಮಣಿ, ಕೆ.ಎಮ್. ಮೇಘಾ
ಕೇ/ಆಫ್ ರಾಮಣ್ಣ(ಪೋಲಿಸ್), 1ನೇ ಮಹಡಿ, ವಿದ್ಯಾರಣ್ಯ ನಗರ, ನಂದಿನಿ ಕಲ್ಯಾಣ ಮಂಟಪದ ಹತ್ತಿರ, ಸಂಡೂರ ರಸ್ತೆ, ಹೊಸಪೇಟೆ–583203

ಬಾಕಿ ಮೊತ್ತ: ರೂ. 65,99,539.91 (ರೂ. ಅರವತ್ತೈದು ಲಕ್ಷದ ತೊಂಬತ್ತೊಂಬತ್ತು ಸಾವಿರದ ಐದು ನೂರ ಮೂವತ್ತೊಂಬತ್ತು ರೂಪಾಯಿಗಳು ತೊಂಬತ್ತೊಂದು ಪೈಸೆಗಳು) ದಿನಾಂಕ 30–11–2025 ಮತ್ತು ಬಡ್ಡಿ, ವೆಚ್ಚ ಮತ್ತು 30–11–2025 ರಿಂದ ಅನ್ವಯವಾಗುವಂತೆ.

ಸ್ಥಿರಾಸ್ತಿಯ ವಿವರಗಳು: ಆಸ್ತಿ ನಂ. 1606, ಪಿಆಯ್‌ಡಿ ನಂ. 31–3–575 266ಎ, ಎನ್.ಎ. ಪ್ಲಾಟ್ ನಂ. ಅ–1, ಸರ್ವೆ ನಂ. 242ರಲ್ಲಿ ರಚಿಸಲಾದ, ಮೌಲ್ಯಮಾಪನ ನಂ. 29, ವರ್ಡ ನಂ. 31, ಟಿ.ಎಸ್.ಪಿ. ಕಾಲೋನಿ, ಆರ್.ಟಿ.ಓ. ಕಚೇರಿ ಹತ್ತಿರ, 1ನೇ ಅಡ್ಡ ರಸ್ತೆ, ವಿವೇಕಾನಂದ ನಗರ, ಹೊಸಪೇಟೆ, ವಿಜಯನಗರ ಜಿಲ್ಲೆ, ಹೊಸಪೇಟೆ ಸಿಟಿ ಮುನ್ಸಿಪಲ್ ಕೌನ್ಸಿಲ್ ವ್ಯಾಪ್ತಿಗೆ ಬರುವ ಪೂರ್ವ–ಪಶ್ಚಿಮ: 40ಅಡಿ, ಉತ್ತರ–ದಕ್ಷಿಣ: 60 ಅಡಿ ಇರುವ ಜಾಗದಲ್ಲಿ ಕಟ್ಟಿರುವ ಮನೆ, ಇರುವ ಆಸ್ತಿ ಎಲ್ಲ ಸ್ವತ್ತುಗಳೊಂದಿಗೆ.

ಚಕಬಂದಿ: ಪೂರ್ವ: ಪ್ಲಾಟ್ ನಂ A-1
ಪಶ್ಚಿಮ: ಪ್ಲಾಟ್ ನಂ. C-1-A
ಉತ್ತರ: ಸರ್ವೆ ನಂ. 241
ದಕ್ಷಿಣ: ರಸ್ತೆ

ಮೀಸಲು ಬೆಲೆ: ರೂ. 73,45,610/–, ಇ.ಎಮ್.ಡಿ. ಮೊತ್ತ: ರೂ 7,34,561/–, ಬಿಡ್ ಹೆಚ್ಚಳ ಮೊತ್ತ: ರೂ 30,000/–
ಇ–ಹರಾಜಿನ ದಿನಾಂಕ ಮತ್ತು ಸಮಯ: 19–11–2026, ಮಧ್ಯಾಹ್ನ 11.00 ರಿಂದ ಸಂಜೆ 6.00 ಗಂಟೆಯವರೆಗೆ
ಇ.ಎಮ್.ಡಿ. ಮೊತ್ತ ಪಾವತಿಸಲು ಕೊನೆಯ ದಿನಾಂಕ ಮತ್ತು ಸಮಯ: 19/11/2026 ಸಂಜೆ 5.00 ಗಂಟೆಯವರೆಗೆ

ಸಾರ್ವಜನಿಕರಿಗೆ ಸಾಮೂಹಿಕವಾಗಿ ಹಾಗೂ ಸಾಲಗಾರರಿಗೆ ಹಾಗೂ ಜಾಮೀನುದಾರರಿಗೆ ಪ್ರತ್ಯೇಕವಾಗಿ ನೋಟಿಸ್ ಜಾರಿ ಮಾಡಿದ್ದು, ಈ ಮೂಲಕ ತಿಳಿಸುವುದೇನೆಂದರೆ, ಸುರಕ್ಷಿತ ಸಾಲಗಾರರಿಗೆ ಅಡಮಾನ ಮಾಡಲಾದ/ಅಧಿಕಾರ ನೀಡಲಾದ ಈ ಕೆಳಗೆ ವಿವರಿಸಿದ ಸ್ಥಿರಾಸ್ತಿಯನ್ನು ಸುರಕ್ಷಿತ ಸಾಲದಾತರಾದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಗಳು ರಚನಾತ್ಮಕ/ಭೌತಿಕ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಖಾಸಗಿ ಒಪ್ಪಂದದ ಪ್ರಕಾರ ಬ್ಯಾಂಕ್‌ಗೆ ಸಮ್ಮತವಾಗುವ ನಿಯಮಗಳ ಅನುಸಾರ **'ಎಲ್ಲಿದೆಯೋ ಹಾಗೆ' ಮತ್ತು 'ಸ್ವತ್ತುಹೇಗಿದೆಯೋ ಹಾಗೆ' ಹಾಗೂ 'ಏನಿದೆಯೋ ಇದ್ದ ಹಾಗೆ'** (ಪೀಠೋಪಕರಣಗಳು, ಫಿಕ್ಚರ್ಸ್, ಸ್ಟಾಕ್ಸ್, ಹಾಗೂ ಇತರೆ ಚರಾಸ್ತಿಗಳನ್ನು ಹೊರತುಪಡಿಸಿ) **ಸ್ಥಿತಿಯಲ್ಲಿ ಈ ಆಸ್ತಿಗಳನ್ನು ದಿನಾಂಕ 19–11–2026ರಂದು ಆನ್ ಲೈನ್ ವೆಬ್ ಪೋರ್ಟಲ್ https://BANKNET.COM) ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾಗೆ ಬರಬೇಕಾಗಿರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಹರಾಜು ಮಾಡಲಾಗುವುದು.** ಇ–ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbank.bank.in ಅನ್ನು ನೋಡಿ.

2002 ರ ಭದ್ರತಾ ಹಿತಾಸಕ್ತಿ(ಜಾರಿ) ನಿಯಮಗಳ ನಿಯಮ 6(20) ಮತ್ತು 8(6) ರ ಪ್ರಾವಿಸೋಗಳೊಂದಿಗೆ ಓದಿಕೊಳ್ಳಬೇಕಾದ 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಇ–ಹರಾಜು.

ಆಸಕ್ತಿ ಬಿಡ್ಡುದಾರರು ಇ–ಹರಾಜಿನಲ್ಲಿ ಭಾಗವಹಿಸಲು ವೆಬ್ ಪೋರ್ಟಲ್ https://banknet.com/eauction-psb/bidder-registration ಮೂಲಕ ನೋಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸವರ್ಡ್ ಪಡೆಯಬೇಕು. ಇ–ಹರಾಜಿನ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು https://BANKNET.COM) ನೋಡಿ. ಇ–ಹರಾಜಿನ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ದಯವಿಟ್ಟು https://www.centralbank.bank.in ಅನ್ನು ನೋಡಿ.

ಯಶಸ್ವಿ ಬಿಡ್ಡುದಾರರು ಬಿಡ್ ಮೊತ್ತದ 25% ಅನ್ನು (ಇಎಮ್‌ಡಿ ಮೊತ್ತವನ್ನು ಒಳಗೊಂಡಂತೆ) ಅದೇ ದಿನ ಅಥವಾ ಹರಾಜಿನ ಮರುದಿನ ಮಾವತಿಸಬೇಕು. ಯಶಸ್ವಿ ಬಿಡ್ಡುದಾರರು ಹರಾಜಿನ ಮರಿದಿನದೊಳಗೆ ಬಿಡ್ ಮೊತ್ತದ 25% ಹಣವನ್ನು ಪಾವತಿಸಲು ವಿಫಲವಾದರರೆ ಇಎಮ್‌ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮಾರಾಟದ ದೃಢೀಕರಣದ 15 ದಿನಗಳಲ್ಲಿ ಸಂಪೂರ್ಣ ಬಿಡ್ಡ ಮೊತ್ತವನ್ನು ಪಾವತಿಸಬೇಕು. ನಿಗದಿತ ಅವಧಿಯೊಳಗೆ ಬಿಡ್ ಮೊತ್ತವನ್ನು ಪಾವತಿಸಲು ವಿಫಲವಾದರೆ ಈಗಾಗಲೇ ಪಾವತಿಸಿದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಮಾರಾಟ ಪ್ರಮಾಣಪತ್ರವನ್ನು ಬಿಡ್ ಸಲ್ಲಿಸಿದ ವ್ಯಕ್ತಿ/ಗಳ ಹೆಸರಿನಲ್ಲಿ ಮಾತ್ರ ನೀಡಲಾಗುವುದು, ಬೇರೆ ಯಾವುದೇ ವ್ಯಕ್ತಿ/ಗಳ ಹೆಸರಿನಲ್ಲಿ ಅಲ್ಲ. ಯಶಸ್ವಿ ಬಿಡ್ಡುದಾರರು ನೋಂದಣಿ ವೆಚ್ಚಗಳು/ ಮುದ್ರಾಂಕ ಶುಲ್ಕ ಅಥವಾ ಅನ್ವಯವಾಗುವ ಯಾವುದೇ ಇತರ ವೆಚ್ಚವನ್ನು ಭರಿಸುತ್ತಾರೆ.

ನಿಯಮಗಳು ಮತ್ತು ಷರತ್ತುಗಳು ಕಟ್ಟುನಿಟ್ಟಾಗಿ ಭದ್ರತಾ ಆಸಕ್ತಿಯ ನಿಯಮಗಳ (ಜಾರಿ) ನಿಯಮಗಳು, 2002ರ ನಿಬಂಧನೆಗಳ ಪ್ರಕಾರ ಇರಬೇಕು.

ಸರ್ಫೇಸಿ ಕಾಯ್ದೆ, 2002ರ ನಿಯಮ 8(6)ರ ಅಡಿಯಲ್ಲಿ 30 ದಿನಗಳ ಶಾಸನಬದ್ಧ ಮಾರಾಟದ ನೋಟಿಸ್

ಸಾಲಗಾರ/ಖಾತರಿದಾರರು ಮೇಲೆ ತಿಳಿಸಿದ ಮೊತ್ತವನ್ನು ಇ–ಹರಾಜಿನ ದಿನಾಂಕದ ಮೊದಲು ನವೀಕೃತ ಬಡ್ಡಿ ಮತ್ತು ಪೂರಕ ವೆಚ್ಚಗಳೊಂದಿಗೆ ಪಾವತಿಸಲು ಸೂಚಿಸಲಾಗಿದೆ. ಇದರಲ್ಲಿ ವಿಫಲರಾದರೆ ಆಸ್ತಿಯನ್ನು ಹರಾಜು/ಮಾರಾಟ ಮಾಡಲಾಗುವುದು ಮತ್ತು ಇನ್ನಷ್ಟು ಮೊತ್ತವು ಬಾಕಿ ಉಳಿದಿದ್ದರೆ, ಬಡ್ಡಿ ಮತ್ತು ವೆಚ್ಚಗಳೊಂದಿಗೆ ವಸೂಲಿ ಮಾಡಲಾಗುವುದು.

ದಿನಾಂಕ: 02–11–2026 | ಸಹಿ/– ಅಧಿಕೃತ ಅಧಿಕಾರಿ
ಸ್ಥಳ: ಹೊಸಪೇಟೆ | ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ. 28 UBL 2026-27, ದಿನಾಂಕ: 29.10.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರಸಂ	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಬನ್ನಿಹಟ್ಟಿ – ರಂಜೀತಪುರ (ಬಿಎನ್‌ಹೆಚ್‌ಟಿ–ಆರ್‌ಎನ್‌ಜೆಪಿ): ಟ್ರೆಫ್ ರೀಇನ್‌ಫೋರ್ಸ್‌ಮೆಂಟ್ ಮ್ಯಾಟ್ ಮತ್ತು ಬೌಲ್ಡರ್ ನೆಟ್ಟಿಂಗ್ ಮೂಲಕ ದುರ್ಬಲವಾದ ಕಟಿಂಗ್ ಇಳಿಜಾರುಗಳಿಂದ ಬೌಲ್ಡರ್‌ಗಳು ಕೆಳಗೆ ಬೀಳುವುದರಿಂದ ಮತ್ತು ಮಣ್ಣಿನ ಸವೆತದಿಂದ ರಕ್ಷಿಸುವುದು.	ರೂ. 6,41,52,136.00
2	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಗದಗ (ಯುಬಿಎಲ್–ಜಿಡಿಜಿ) ವಿಭಾಗ: ಅಣ್ಣಿಗೇರಿ– ಹುಲಕೋಟಿ (ಎನ್‌ಜಿಆರ್–ಎಲ್‌ಕೆಟಿ) ನಿಲ್ದಾಣಗಳ ನಡುವೆ ಆರ್‌ಹೆಚ್ ಗಿರ್ಡರ್/ಕಟ್ ಮತ್ತು ಕವರ್ ಮಾದರಿಯಲ್ಲಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳಿಂದ ಬ್ರಿಡ್ಜ್ ನಂ. 14 (ಡೌನ್ ಲೈನ್) ನ ಮರುನಿರ್ಮಾಣ.	ರೂ. 55,05,180.00
3	ಹುಬ್ಬಳ್ಳಿ ವಿಭಾಗ: 05 ನಿಲ್ದಾಣಗಳಲ್ಲಿ ಪ್ರಸ್ತಾವಿತ ಟ್ರ್ಯಾಕ್ ಮಶೀನ್ ಸೈಡಿಂಗ್‌ಗಳ ನಿರ್ಮಾಣ. ಹರ್ಲಾಪುರ (ಆರ್‌ಎಲ್‌ಪಿ), ತಲಕಲ್ (ಟಿಎಲ್‌ಕೆಎಲ್), ರಂಜೀತಪುರ (ಆರ್‌ಎನ್‌ಜೆಪಿ), ಯಶವಂತನಗರ (ವೈಟಿಜಿ) ಮತ್ತು ರಾಯದುರ್ಗ (ಆರ್‌ಡಿಜಿ).	ರೂ. 2,72,83,434.00
4	ಹುಬ್ಬಳ್ಳಿ ವಿಭಾಗ: ಹುಬ್ಬಳ್ಳಿ – ಬಳ್ಳಾರಿ (ಯುಬಿಎಲ್–ಬಿಎವೈ) ವಿಭಾಗ: ಹೊಸಪೇಟೆ – ಕುಡಾತಿನಿ ವಿಭಾಗದ ನಡುವೆ ಆರ್‌ಯುಬಿ ನಂ. 198ಎ ನಲ್ಲಿ ಚರಂಡಿ, ಸ್ಪೀಡ್ ಹಂಪ್‌ಗಳು, ಕ್ಯಾಚ್ ವಾಟರ್ ಡ್ರೈನ್ ಮುಂತಾದವುಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು.	ರೂ. 1,96,99,796.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.11.2026, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/583/AAD/PRB/SWR/2026-27 | ವರಿಷ್ಠ ವಿಭಾಗೀಯ ಅಭಿಯಂತರರು/ಸಂಯೋಜನೆ/ಹುಬ್ಬಳ್ಳಿ

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

SK CLASSIFIED

ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

ಓದುಗರ ಗಮನಕ್ಕೆ

WANTED
Fabrication Grill, Gates Fabrication Welder & Helper
SHREE VENKATESHWAR STEELS
Industrial Estate, II Gate, Near KEB Office, Gokul Road, Hubballi-30.
Cell: 9845253448

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್ ಎಸ್ ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಪ್ಯಾನ್ ಸಂಖ್ಯೆ: AAATL 1086H
6) ವಿ.ಸೂ: ತಾವು ಜಮೆ ಮಾಡಿದ ಪೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ಕಳುಹಿಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ಕಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು..... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ–ಮೇಲ್: skhubli@gmail.com

PUBLIC NOTICE

Under the instructions and on behalf of my client Sri. Bharath Kumar H.P., S/o H.K. Prakash, aged about 29 years, residing at Hanumanthapura Village, Jarabandahalli Post, Manchenahalli Hobli & Taluk, Chickballapura District, I issue this legal notice as follows:

1. That you and my client are known to each other for several years. Due to the said friendship, you approached my client and requested for financial assistance of Rs. 3,50,000/- for your family legal necessities. You agreed to repay the same within 6 months.
2. As per your request and considering the urgency, my client arranged and paid a sum of Rs. 2,50,000/- (Rupees Two Lakhs Fifty Thousand Only) through PhonePe on several dates. The said amount was received by you and you assured to repay it within six months from the date of receipt.
3. That as per your assurance, when my client demanded repayment in the month of September 2026, you, in order to discharge your said liability, issued a cheque bearing No. 706900, dated 19-09-2026, for Rs. 2,50,000/- drawn on Canara Bank, Hosahalli Kudligi Branch, in favour of my client. You requested my client to present the cheque on the said date and assured that you would maintain sufficient balance.
4. That my client presented the said cheque through his banker on 23-09-2026. However, the said cheque was dishonoured and returned with an endorsement and memo dated 23-09-2026 stating "Drawer's Signature Differs". My client was shocked and immediately informed you. On your request for one week's time, my client re-presented the cheque on 01-10-2026 through Canara Bank, Namagondlu Branch. Again, it was dishonoured with a memo dated 01-10-2026 stating "10 Drawer's Signature Differs".
Your act of issuing a cheque without maintaining proper signature and account shows your dishonest intention, gross negligence and intention to cheat my client.
5. Hence, I hereby call upon you to pay the cheque amount of Rs. 2,50,000/- (Rupees Two Lakhs Fifty Thousand Only) to my client within 15 days from the receipt of this notice.
If you fail to pay the said amount within 15 days, your act will amount to an offence punishable under Section 138 of the Negotiable Instruments Act and Under Section 318 of Bharatiya Nyaya Sanhita, 2023. In that event, my client will be constrained to initiate appropriate legal proceedings against you at your cost and consequence.
You are also liable to pay a sum of Rs. 10,000/- towards the cost of this legal notice.

Dayananda P.V., Advocate
T.G. Complex, Opposite to New J.M.F.C. Court, Court Road, Gowribidanur Town.
Mobile No: 9448775241
Place: Gowribidanur, Date: 05-10-2026